ಹೊಡೆದಂತೆ ಜಡವಾದ ಸಂದರ್ಭದಲ್ಲಿ ವಿದ್ವತ್ತನ್ನು ಧ್ವಾನಿಸುವವರೆಲ್ಲರೂ ಈಗ ಮುಖ್ಯರಾಗುತ್ತಿದ್ದಾರೆ.

ಕನ್ನಡ ಸಾಹಿತ್ಯ ಇಂದು ನಮ್ಮ ಕಾಲದ ತಲ್ಲಣಗಳನ್ನು ಹಿಡಿದು ದಾಖಲಿಸಲೂ ಆಗದಷ್ಟು ನಿತ್ರಾಣಗೊಂಡಿದೆ. ಮರಗಿಡಗಳು ತಮ್ಮ ಕಷ್ಟ ಸುಖಗಳನ್ನು ದಾಖಲಿಸಿಕೊಳ್ಳುತ್ತವೆ. ಇದನ್ನು ಅರ್ಥ ಮಾಡಿಕೊಳ್ಳಲು ಟ್ರೀ ರಿಂಗ್ ಕ್ರೋನಾಲಜಿ ಎಂಬ ಅಧ್ಯಯನ ಶಾಸ್ತ್ರವಿದೆ. ಬರ ಯಾವಾಗ ಬಂದಿತ್ತು, ಮಳೆಯ ಸಮೃದ್ಧಿ ಯಾವಾಗ ಇತ್ತು, ರೋಗಬಾಧೆಗಳು ಯಾವಾಗ ಇದ್ದವು, ಇವೆಲ್ಲವನ್ನು ಮರದ ಒಡಲು ದಾಖಲಿಸಿಕೊಂಡಿರುತ್ತದೆ. ಇವನ್ನು ಈ ಶಾಸ್ತ್ರದ ಮೂಲಕ ತಿಳಿದುಕೊಳ್ಳಬಹುದು. ಆದರೆ ನೆನಪು, ಕನಸುಗಳಿರುವವರು, ಜ್ಞಾನ ಸೃಷ್ಟಿಯ ಕೆಲಸ ಮಾಡುವವರು ಮನುಷ್ಯರ ಸುಖ ದುಃಖಗಳನ್ನು ದಾಖಲಿಸಲು ಮುಂದಾಗುತ್ತಿಲ್ಲ. ಇದು ಪ್ರಕಾಶ್‌ಗೆ ಅರ್ಥವಾಗಿದ್ದರಿಂದಲೇ ಅವರು ವಿದ್ವತ್ ಕ್ಷೇತ್ರವನ್ನು ಗಂಭೀರವಾಗಿ ಪರಿಗಣಿಸಿದ್ದರು.

ಪ್ರಕಾಶ್ ಅವರ ಒಟ್ಟು ಬರಹಗಳನ್ನು ನೋಡಿದ ಮೇಲೆ ಅನ್ನಿಸುವುದು ಅವರೊಳಗೊಬ್ಬ ವಿಮರ್ಶಕನಿದ್ದ. ಆದರೆ, ಪ್ರಕಾಶ್ ವಿಮರ್ಶೆಯ ಯಾಂತ್ರಿಕತೆಯನ್ನು ದಾಟಿ ಮೀಮಾಂಸಕನಾಗಲು, ಸಂಸ್ಕೃತಿ ಚಿಂತಕನಾಗಲು ಪ್ರಯತ್ನ ಪಡುತ್ತಿದ್ದುದು ಶರಣರು, ಬೌದ್ಧರು, ರಾಷ್ಟ್ರೀಯತೆ, ಭಕ್ತಿ, ಅದ್ವೈತ, ಮುಂತಾದ ವಿಷಯಗಳ ಮೇಲೆ ಅವರು ಮಂಡಿಸಿರುವ ಒಳನೋಟಗಳಲ್ಲಿ ಕಾಣುತ್ತದೆ. ಪ್ರಾಚೀನ ಪಠ್ಯ ಮತ್ತು ಚಿಂತನೆಗಳಿಗೆ ಮುಖಾಮುಖಿಯಾಗುತ್ತಿದ್ದಾಗಲೂ ಆ ವಿದ್ವತ್ತನ್ನು ಸಮಕಾಲೀನಗೊಳಿಸಲು, ವರ್ತಮಾನದ ತುರ್ತುಗಳಿಗೆ ಪರಿಹಾರ ಹುಡುಕಲು ಯತ್ನಿಸುತ್ತಿದ್ದುದು ಕಾಣಿಸುತ್ತದೆ.

ಎಲ್ಲವೂ ಇನ್ ಕ್ಲೂಸಿವ್ ಆಗಬೇಕು, ಡೆಮಾಕ್ರಟಿಕ್ ಆಗಬೇಕು ಎಂಬುದನ್ನು ಪ್ರಕಾಶ್ ಹಲವೆಡೆ ಪ್ರಸ್ತಾಪಿಸುತ್ತಾರೆ. ಆದರೆ, ವಿಚ್ಛಿದ್ರಕಾರಿ ಶಕ್ತಿಗಳು ಸಮಾಜವನ್ನು ಒಡೆದು ಹಾಕುತ್ತಿರುವ ಕಾಲಘಟ್ಟದಲ್ಲಿ ಒಳಗೊಳ್ಳುವಿಕೆ ಎಂಬುದು ಸಂಜೀವಿನಿ ಸೂತ್ರದಂತೆ ಕಾಣುತ್ತದೆ. "ಎಲ್ಲವನ್ನೂ ಏಕರೂಪಿಯಾಗಿ ಮಂಡಿಸುವ ಸಾಂಸ್ಕೃತಿಕ ಮೂಲಭೂತವಾದಿ ರಾಜಕಾರಣದ ಕುಯುಕ್ತಿ ಮತ್ತು ಕುತರ್ಕದ ಸಂಶೋಧನೆಗಳ ನಡುವೆ ಶ್ರದ್ಧೆಯಿಂದ ಅಧ್ಯಯನ ಮಾಡಬೇಕು" ಎಂದು ಅವರು ಬರೆಯುತ್ತಾರೆ.

ಪ್ರಕಾಶ್ ಅವರ ಬರಹಗಳಲ್ಲಿ ಕಾಣದ ಹಲವು ಒಳನೋಟಗಳು ಅವರ ಭಾಷಣದಲ್ಲಿ ಕಾಣುತ್ತವೆ. ಈ ಪುಸ್ತಕದಲ್ಲಿ ಪ್ರಕಾಶರ ಪ್ರತಿಭೆಯ ಮಿಂಚುಗಳನ್ನು ಕಾಣಿಸುವ ಅತ್ಯುತ್ತಮ ಭಾಗಗಳು ಅವರ ಭಾಷಣಗಳಲ್ಲಿವೆ. ಅವರ ಹುಡುಕಾಟಗಳಲ್ಲಿ ಹಲವು ಸಂಗತಿಗಳನ್ನು ಹೊಸದಾಗಿ ಗುರ್ತಿಸುವ ಶಕ್ತಿಯಿದೆ. 'ದಲಿತ ಸಾಹಿತ್ಯವು ಕಾನೂನಿನ ಪರಿಭಾಷೆಯನ್ನು ಬಳಸುತ್ತದೆ. ಪರಂಪರೆ ಎಂದು ಹೇಳುವವರಲ್ಲಿ ಪಾಳೆಗಾರಿಕೆಯ ಭಾಷೆ ಇದೆ' ಎನ್ನುತ್ತಾರೆ. ಪ್ರಕಾಶರಿಗೆ ಸರಿಯಾದುದನ್ನು ಗುರುತಿಸಿ ಅದಕ್ಕೆ ಸರಿಯಾದ ಬೆಲೆ ಕಟ್ಟುವ ಶಕ್ತಿಯಿತ್ತು. ಅದು ಅವರ ಇಲ್ಲಿನ ಅಭಿವ್ಯಕ್ತಿಗಳಲ್ಲಿ ಗೊತ್ತಾಗುತ್ತದೆ.

ಪ್ರಕಾಶ್ ಬದುಕು–ಬರಹಗಳ ಬಗ್ಗೆ ಕೃತಿಯ ಸಂಪಾದಕಿ ಸುಕನ್ಯಾ ಆಪ್ತವಾಗಿ ವಿವರಿಸಿದ್ದಾರೆ. ದುಃಖದಲ್ಲೂ ಅವರು ಅನೇಕ ಕಡೆ ಕ್ರಿಟಿಕಲ್ ಆದ ನಿಲುವನ್ನು ತೆಗೆದುಕೊಂಡಿದ್ದಾರೆ. ತಮ್ಮ ಬರಹಕ್ಕೆ ಅವರು 'ಕಹಿ–ಸವಿ ನೆನಪು' ಎಂದು ಹೆಸರಿಟ್ಟಿದ್ದಾರೆ. ಪ್ರಕಾಶರ ಮಾನವೀಯ ಗುಣ, ಅಂತರ್ಮುಖತೆ, ಗೆಳೆಯರ ಗುಂಪುಗಳಲ್ಲಿ ಸಂಭವಿಸುತ್ತಿದ್ದ ಪ್ರತಿಭಾ ಸ್ಫೋಟ, ಜಾತ್ಯತೀತತೆ, ಅಪಾರ ಓದು ಇವೆಲ್ಲವನ್ನೂ ಸುಕನ್ಯಾ ತಮ್ಮ ಬರವಣಿಗೆಯಲ್ಲಿ ಹಿಡಿದಿರಿಸಿದ್ದಾರೆ.

ಈ ಪುಸ್ತಕಕ್ಕೂ ಮೊದಲು ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ, ಚಿಂತಕ ಡಾ. ಡಿ.ಆರ್. ನಾಗರಾಜ್ ಅವರ ವಿಮರ್ಶೆಗಳನ್ನು ಆಧರಿಸಿ ಪ್ರಕಾಶ್ ಅವರು ಮಾಡಿರುವ ಸಂಶೋಧನೆಯ ಪ್ರಬಂಧ 'ಡಿ.ಆರ್. ನಾಗರಾಜ ವಿಮರ್ಶೆಯ ಕಥನ' (2016) ಪ್ರಕಟವಾಗಿದೆ. ಈ ಪುಸ್ತಕದ ಜೊತೆಗೇ 'ನುಡಿ ಸಂಕಥನ'ವನ್ನು ವರ್ತಮಾನದ ಕುರಿತು ತೀವ್ರ ಆಸಕ್ತಿ, ಪರಂಪರೆಯ ಸಮರ್ಪಕ ಜಾಡುಗಳನ್ನು ಹುಡುಕ ಬಯಸುವ ವಿದ್ಯಾರ್ಥಿಗಳು, ವಿದ್ವಾಂಸರು, ಮುಖ್ಯವಾಗಿ ಹೊಸ ತಲೆಮಾರಿನವರು ಓದುವುದು ಒಳ್ಳೆಯದು. ಸಂಶೋಧನೆಯನ್ನು ಗಂಭೀರವಾಗಿ ಪರಿಗಣಿಸುವವರಿಗೆ ಇವುಗಳ ಓದು ಮಾರ್ಗದರ್ಶಿಯಾಗಬಹುದು.

●